ಶ್ರೀ ಎಸ್. ಆರ್ ಬೊಮ್ಮಾಯಿ. —ಕಾನೂನೇತರ ಸಲಹೆ ಏನೆಂದರೆ, ಈಗಿನ ಕಾರ್ಮಿಕ ಮಂತ್ರಿಗಳವರು ಒಮ್ಮೆ ನನ್ನ ಪತ್ತಿರ ಪತ್ರಿಕೆಯನ್ನು ಪ್ರಾರಂಭ ಮಾಡುವ ಉತ್ಸಟ ಇಚ್ಛೆ ಇದೆಂದು ಹೇಳಿದ್ದರು, ಅವರು ಇದೇ ಪತ್ರಿಕೆಯನ್ನು ತೆಗೆದುಕೊಂಡು ಏತಕ್ಕೆ ನಡೆಸಬಾರದು, ಇವನ್ನೇ ತೆಗೆದುಕೊಂಡು ನಡೆಸಿದರೆ ಒಳ್ಳೆಯದು ಆಗುವುದಿಲ್ಲವೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಸಭಾಪತಿಗಳೇ, ಯಾವನಿಗೋ ಆಸೆ ಆಯಿತು. ಮದುವೆ ಆಗಬೇಕು ಅಂತ, ಮದುವೆ ಆದ, ಮದುವೆಯಾದ ಮೇಲೆ ಬಾಡಿಗೆ ಮನೆ ಮಾಡಿದ, ಅವನಿಗೆ ನಾಲ್ಕು ಮಕ್ಕಳಾಯಿತು ಅವನು ಆ ಮನೆಯನ್ನು ಬಿಟ್ಟು ಹೋಗುವಾಗ, ಈ ನಾಲ್ಕು ಮಕ್ಕಳು ನಿಮ್ಮ ಮನೆಯಲ್ಲಿ ಹುಟ್ಟಿವೆ ಆದುದರಿಂದ ನೀವೆ ಇಟ್ಟುಕೊಳ್ಳಿ ಅಂತ ಹೇಳಿದನಂತೆ. ಆ ರೀತಿ ಆಗುಬಾರದು. ಆದುದರಿಂದ ಮಾನ್ಯ ಸದಸ್ಯರುಗಳೆಲ್ಲಾ ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಇನೇ ತಾರೀಖಿನ ದಿವಸದ ಸಭೆಯಲ್ಲಿ ಪರಿಶೀಲನೆ ಮಾಡಲಾಗುತ್ತದೆ. ಮತ್ತೆ ಮಾನ್ಯ ಶ್ರೀ ದೇವೇಗೌಡರವರು ಮಾತನಾಡತಕ್ಕ ಸಂದರ್ಭದಲ್ಲಿ ೧ ತಿಂಗಳ ಹಿಂದೆಯೇ ಅಂತ ಹೇಳಿದರು, ನಿಜ ೧ ತಿಂಗಳಾಗಿದೆ. ಇದು ಕಾರ್ಮಿಕರ ಮಟ್ಟದಲ್ಲಿ ಹಂತಹಂತವಾಗಿ ವಿಷಯಂ ಚರ್ಚೆಯಾಗಿ ಇವತ್ತು ನನ್ನ ಲೆವೆಲ್‌ನಲ್ಲಿ ಚರ್ಚೆಯಾಗುವುದಕ್ಕೆ ಬಂದಿದೆ. ಅದು ೧ ತಿಂಗಳಿ ನಿಂದಲೂ ಪ್ರೊಸೆಸ್ ಆಗುತ್ತಾ ಬಂದಿದೆ. ಇನೇ ತಾರೀಖು ಆದ ಮೇಲೆ ನಿಮ್ಮೆಲ್ಲರನ್ನೂ ಕರೆಯುತೇನೆ ಆಗ ಏನಾದರೂ ಸಲಹೆಗಳು ಇದ್ದರೆ ನೀಡಿ.

SRI B. SUBBAIAH SHETTY.—You say that it has been processed since one month.

ಶ್ರೀ ಸಿ. ಎಂ. ಇಬ್ರಾಹಿಂ.—ತಾವು ಮಿನಿಸ್ಟರ್ ಆಗಿದ್ದವರು ಹೀಗೆ ಹೇಳಿದರೆ ಹೇಗೆ ? ಲೋಕ ಶಿಕ್ಷಣ ಟ್ರಸ್ಟ್ ಅಂತ ಆಗಲೇ ಆಯಿತು, ಆಗಲೇ ನೀವು ಇದನ್ನು ಸರಿಪಡಿಸಿದ್ದರೆ ಇಷ್ಟು ಆಗುತ್ತಲೇ ಇರ ಲಿಲ್ಲ. ಆಗೇನು ಕಣ್ಣುಮುಚ್ಚಿಕೊಂಡು ನೀವು ಕುಳಿತಿದ್ದೀರಾ ? ತಾವು ಆಗ ಸರಿಪಡಿಸಿದ್ದರೆ ಇಂಥಾ ಅನಾಹುತವೆ ಆಗುತ್ತಾ ಇರಲಿಲ್ಲ. ಇದಕ್ಕೆ ನೀವೇ ಜವಾಬ್ದಾರರು ಏತಕ್ಕೆ ಸುಮ್ಮನೆ ಬಾಯಿ ಬಡಿಸುತ್ತೀರಿ? ನೀವು ಆಗ ಕಣ್ಣುಮುಚ್ಚಿ ಕುಳಿತು ಇವತ್ತು ನಮ್ಮ ತಲೆಯ ಮೇಲೆ ಏತಕ್ಕೆ ಗೂಬೆ ಕೂರಿಸುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಗೊತ್ತಿಲ್ಲದೆ ಹೇಳುವುದಕ್ಕೆ ಹೋಗಬೇಡಿ. ಕನ್‌ಸಿಲಿಯೇಷನ್ ಪ್ರೊಸೀ ಡಿಂಗ್ಸ್ ಎನ್ನತಕ್ಕಂಥದ್ದು ಪ್ರಥಮ ಹೆಜ್ಜೆ. ಈಗ ಅದನ್ನು ನಡೆಸುತ್ತಿದ್ದೇವೆಂದು ಹೇಳುತ್ತಿದ್ದೀರಿ, ಮತ್ತೆ ೧ ತಿಂಗಳಿನಿಂದ ಪ್ರೊಸೆಸ್ ಮಾಡುತ್ತಿದ್ದೇವೆಂದು ಹೇಳಿದರೆ ಏನು ಅರ್ಥ ? This is the preliminary thing which you are doing. You are saying that it is being processed for the last one month. That shows that you are ignorant of the Industrial Disputes Act.

(iii) *re: Fire accident at Sogane Village Shimoga Taluk*

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಸೋಗಾನೆ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ಅಗ್ನಿ ದುರಂತದ ಬಗ್ಗೆ ಮಾನ್ಯ ಮಂತ್ರಿಗಳವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರ ಪರವಾಗಿ ಈ ಕೆಳಗಿನ ಹೇಳಿಕೆಗಳನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

On 12th February 1980, an accidental fire took place in Sogane Village, Nidige Hobli, Shimoga Taluk resulting in the destruction of 11 Houses. The total loss is estimated at Rs. 21,490 The following are the persons affected by the fire Accident :

Shriyut /Smts.

1. Nataraj bin Narayanaswamy
2. Mallappa bin Dharmappa

3. Yellappa bin Shettibovi
4. Shivanna bin Bharmanna
5. Thimmaiah bin Thimmanna
6. Kendajja
7. Muniappa bin Thippanna
8. Ganganna
9. Nagappa bin Rangappa
10. Durgappa bin Durgabovi
11. Sharadamma

The Tahsildar, Shimoga Taluk, has already taken action to grant cash relief and building materials at the rate of Rs. 300 and Rs. 200 respectively under the powers delegated in G. O. No. RD 27 TSR 78, dated 29-12-1979. He has sanctioned a total sum of Rs. 2,390 as cash relief and Rs. 1 850 in the form of building materials. Apart from this he has also collected one quintal of rice and a sum of Rs. 80 locally and distributed the same to the sufferers.

The Tahsildar, Shimoga, has also recommended to the Deputy Commissioner, Shimoga, to sanction more relief to sufferers within his powers delegated under GO No. RD 27 TSR 78, dated 29th December 1979 and the Deputy Commissioner, Shimoga, is taking action to sanction the same. There is no paucity of funds to extend relief as per prescribed scale.

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ನಾನು ಈ ಸಂಬಂಧಪಟ್ಟ ಗ್ರಾಮಕ್ಕೆ ಅಗ್ನಿ ದುರಂತವಾದ ವೇಳೆ ಭೇಟಿಕೊಟ್ಟಿದ್ದೆ ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳು, ಅಂದರೆ ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳೂ ಕೂಡ ಬಂದಿದ್ದರು. ಇದರ ಬಗ್ಗೆ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಚರ್ಚೆ ಮಾಡುವ ಕಾಲದಲ್ಲಿ ಅವರು ತಿಳಿಸಿದ್ದು ಏನೆಂದರೆ, ಅವರು ಅಲ್ಲಿ ಮಹಜರು ಎಲ್ಲಾ ಮಾಡಿದ್ದಾರೆ ಅಷ್ಟೋ ಇಷ್ಟೋ ಪರಿಹಾರ ಕೊಡಬೇಕೆಂದಿದ್ದರೂ ಕೂಡ ನಮ್ಮ ಭಾಗಕ್ಕೆ ಗ್ರಾಂಟ್ಸ್ ಸಿಕ್ಕಿಲ್ಲ. ಅದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆಂದು ತಿಳಿಸಿದ್ದಾರೆ. ಒಂದು ವಿಧದಲ್ಲಿ ಈ ಪ್ರಶ್ನೆಗೆ ಮಾನ್ಯ ಅರ್ಥ ಮಂತ್ರಿಗಳವರೇ ಉತ್ತರ ಕೊಟ್ಟಿದ್ದು ಒಳ್ಳೆಯದು ಆಯಿತು. ಆದುದರಿಂದ ತಾವು ಆದರೂ ಅಲ್ಲಿಗೆ ಗ್ರಾಂಟ್ಸ್ ಬೇಗನೆ ಕೊಟ್ಟು ಅಲ್ಲಿ ನೊಂದಿರತಕ್ಕವರಿಗೆ ಪರಿಹಾರವನ್ನು ಆದಷ್ಟು ಬೇಗನೆ ಕೊಡಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಇವತ್ತು ಸರ್ಕಾರದವರ ಕೈಯಲ್ಲಿ ದುಡ್ಡಿಲ್ಲ ಅಂತ ಅಲ್ಲ, ಅಲ್ಲಿಗೆ ಗ್ರಾಂಟ್ಸ್ ಇಲ್ಲ ಅಂತ ಹೇಳುತ್ತಿದ್ದಾರೆ, ಆದುದರಿಂದ ಇದರ ಬಗ್ಗೆ ತುರ್ತು ಗಮನ ಹರಿಸಿ ಅಗತ್ಯವಾದ ಕ್ರಮ ತೆಗೆದುಕೊಂಡು ಗ್ರಾಂಟ್ಸನ್ನು ಒದಗಿಸಿ ಕೊಡಿ. ನಮ್ಮ ಮತ್ತು ನಿಮ್ಮ ಅನುಭವಕ್ಕೆ ಬಂದಿರುವ ವಿಚಾರವನ್ನು ಹೇಳುವುದಾದರೆ ಬೆಂಕಿ ದುರಂತವಾದಾಗ ನಾವು ಅಷ್ಟೋ ಇಷ್ಟು ಪರಿಹಾರವನ್ನು ಕೊಟ್ಟು ಬಿಡುತ್ತೇವೆ ಆದರೆ ಒಲ್ಲಿ ಮೊನ್ನೆ ನಡೆದಂತ ಅಗ್ನಿ ದುರಂತದಲ್ಲಿ ಕೆಲವರು ತಮ್ಮ ಮಂಗಳ ಮುದುವೆಗಾಗಿ ಅಷ್ಟು ಇಷ್ಟು ಹಣ ಒಡವೆಗಳನ್ನು ಕೂಡಿಟ್ಟಿದ್ದರು ಅದೆಲ್ಲಾ ಅರ್ಧಂಭರ್ಧ ಸುಟ್ಟು ಬೂದಿಯಾಗಿ ಹೋಗಿದೆ. ಅದನ್ನೆಲ್ಲಾ ನಾವು ನೋಡಿಕೊಂಡು ಬಂದಿದ್ದೇವೆ ಅಂಥಾ ಸಂಧರ್ಭದಲ್ಲಿ ನಾವು ಕೊಡುತ್ತಿರ ತಕ್ಕಂಥ ಪರಿಹಾರ ಬಹಳ ಕಡಿಮೆಯಾಗುತ್ತಿದೆ. ಆದುದರಿಂದ ಸರ್ಕಾರಿ ಆಜ್ಞೆ ಏನಿದೆ ಅದನ್ನು ಸ್ವಲ್ಪ ಬದಲಾವಣೆ ಮಾಡಿ ಅಂಥಾ ಸಂದರ್ಭದಲ್ಲಿ ಸ್ವಲ್ಪ ಹೆಚ್ಚಿನ ಪರಿಹಾರವನ್ನು ಮಾನವೀಯತೆ ದೃಷ್ಟಿಯಿಂದ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

೩-೩೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.— ನಮಗೆ ತಿಳಿದ ವರ್ತಮಾನದ ಪ್ರಕಾರ ಹಣದ ಕೊರತೆಯಿಂದ ನಿಂತಿಲ್ಲ. ಆದರೂ ಕೂಡ ತಾವು ವಿಚಾರ ಮಾಡಿದ್ದೇವೆಂದು ಹೇಳಿದ್ದೀರಿ. ಹಣದ ತೊಂದರೆಯಿದ್ದರೆ, ನಾವು ಅದಕ್ಕೆ ಬೇಕಾದಷ್ಟು ಹಣವನ್ನು ಕೊಡುತ್ತೇವೆ. ಇನ್ನು ಬೇರೆ ಬೇರೆ ರೀತಿಯಲ್ಲಿ ಕಷ್ಟವಾಗುತ್ತದೆಂದು ಹೇಳಿದ್ದೀರಿ. ೨೯-೧೨-೧೯೭೯ರಂದು ಈ ಬಗ್ಗೆ ರಿವೈಸ್ಡ್ ಆರ್ಡರನ್ನು ಕೊಟ್ಟಿದ್ದೇವೆ. ಇದೇ ರೀತಿ ಮುಂದೆ ಅನೇಕ ಸಮಸ್ಯೆಗಳು ಬಂದಾಗ, ಕೊಟ್ಟಿರುವುದು ಬಹಳ ಕಡಿಮೆಯಾಗುತ್ತದೆಂದು ಭಾವಿಸಿ ಪೆಟ್ಟಿಗೆ ಕೊಡಲು ಹುಕುಂ ಹೊರಡಿಸಿದ್ದೇವೆ. ಅದರಲ್ಲಿ ಇನ್ನೂ ಏನಾದರೂ ಬದಲಾವಣೆಯಾಗಬೇಕಾದ ಸಂದರ್ಭ ಬಂದಾಗ ಪರಿಶೀಲನೆ ಮಾಡೋಣ.

ಶ್ರೀ ಕೆ. ಎಚ್. ಶ್ರೀನಿವಾಸ್.— ಆ ಆಜ್ಞೆಯ ಪ್ರಕಾರ ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ.

ಶ್ರೀ ಎಂ ವೀರಪ್ಪ ಮೊಯ್ಲಿ.— ಅದರ ಪ್ರಕಾರ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇದೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅವರು ಗ್ರಾಂಟ್ಸ್ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಗ್ರಾಂಟ್ಸ್ ಇದೆ ಎಂದು ವರ್ತಮಾನ ಇದೆ. ತೊಂದರೆ ಇದ್ದರೆ ಹಣ ಕೊಡಿಸೋಣ. ತಕ್ಷಣ ಆ ಬಗ್ಗೆ ಪರಿಹಾರ ಮಾಡಬಹುದು.

(iv) Non re: functioning of Land Tribunals in the State

ಶ್ರೀ ಎ. ಜೆ. ಕೊಡಗಿ.— ರಾಜ್ಯದ ಎಲ್ಲಾ ಭೂ ನ್ಯಾಯ ಮಂಡಲಿಗಳ ಕಾರ್ಯ ಸ್ಥಗಿತಗೊಂಡಿರುವುದರಿಂದ ಬಡ ಗೇಣಿದಾರರಿಗೆ ಆಗಿರುವ ತೊಂದರೆಗಳ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— (ಹಣಕಾಸಿನ ಸಚಿವರು),— ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ನಾನು ಈ ಕೆಳಗಿನ ಹೇಳಿಕೆಯನ್ನು ಕೊಡಲು ತಮ್ಮ ಅನುಮತಿಯನ್ನು ಕೇಳುತ್ತೇನೆ.

The Government had suggested to the Deputy Commissioners on 4-12-79 that in view of the pending Lok Sabha Elections, the Tribunal sittings might not be held till the 10th of January 1980. As the members are aware, the non-official members nominated to the Tribunals by the then Government were mostly those who were sympathetic to the party in power.

The Government desire, as far as possible, to give equitable representation on the Tribunals to the members of the opposition parties also. With a view to reconstituting all the Tribunals, the Government have issued further instructions that the Tribunal sittings may not be held till all the Tribunals are reconstituted. Government have received panels of names from the Deputy Commissioners and it is proposed to reconstitute all the Tribunals by the end of this month (February 1980).

ಶ್ರೀ ಎಂ. ವೀರಪ್ಪ ಮೊಯ್ಲಿ.—ಹೇಳಿಕೆಯಲ್ಲಿ ಈ ತಿಂಗಳ ಕೊನೆಯೊಳಗೆ (ಫೆಬ್ರವರಿ ೧೯೮೦) ಪುನರ್ರಚಿಸಲಾಗುವುದು ಎಂದು ಇದೆ. ಆ ವೇಳೆಗೆ ಆಗದಿದ್ದರೂ, ಸಾಧ್ಯವಾದಷ್ಟು ಬೇಗ ಪುನರ್ರಚಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ಜಿ. ಕೊಡಗಿ.—ಈ ಬಗ್ಗೆ ಹೆಚ್ಚಾಗಿ ಕೇಳಬೇಕಾದ ಅವಶ್ಯಕತೆ ಇಲ್ಲ ; ಏಕೆಂದರೆ ಈಗಾಗಲೇ ಪ್ರಶ್ನೋತ್ತರ ವೇಳೆಯಲ್ಲಿ ಸಾಕಷ್ಟು ಕಾಲ ಚರ್ಚೆಯಾಗಿದೆ.ಆದರೂ ಕೂಡ ಜಿಲ್ಲೆಯ ನಮ್ಮ ಮಂತ್ರಿಗಳು ಇವತ್ತು ಈ ವಿವರಣೆಯನ್ನು ಕೊಟ್ಟಿರುವುದರಿಂದ ಅವರ ಗಮನಕ್ಕೆ ಒಂದು ವಿಚಾರವನ್ನು ತರಬೇಕಾಗಿದೆ.